ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು , ಕಲಘಟಗಿ

ಸಿಸಿ ನಂಃ 147/2020

**ಚಾಸಾಃ 1**

**ಪ್ರಾಸಾಃ 3**

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ 27.01.2021 ರಂದು ಪ್ರಮಾಣ ಮಾಡಿಸಲಾಯಿತು.

ಸಾಕ್ಷಿಯ ಹೆಸರು ಃ ಚಿದಾನಂದ ಕರವೀರಪ್ಪನವರ

ತಂದೆಃ ಗಂಡ ಹೆಸರು ಃ ನಾಗಪ್ಪ

ಉದ್ಯೋಗ ಃ ಎ ಎಸ್ ಐ

ವಯಸ್ಸು ಃ 52

ವಾಸಸ್ಥಳ ಃ ಕಲಘಟಗಿ

ಪ್ರಾರಂಭ ಸಮಯ ಃ 05.15 ಎಎಂ.

ಮುಖ್ಯ ವಿಚಾರಣೆ ಎಪಿಪಿ ಅವರಿಂದಃ

2016ರಿಂದ ನಾನು ಕಲಘಟಗಿ ಪೋಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿಃ01.12.2019 ರಂದು ಬೆಳಿಗ್ಗೆ 8.00 ಗಂಟೆಗೆ ನಾನು ಹಾಗೂ ಚಾಸಾ 4 ರಿಂದ ಚಾ.ಸಾ.7ರವರು ಕಲಘಟಗಿ ಪಟ್ಟಣದಲ್ಲಿ ಗಸ್ತು ಸಂಚಾರ ಮಾಡುತ್ತಿರುವಾಗ ಬೆಳಿಗ್ಗೆ 8.30 ಗಂಟೆಗೆ ಶೆಟ್ಟಿ ಲಂಚ್ ಹೋಮ್ ಹತ್ತಿರ ಇದ್ದಾಗ ನನಗೆ ಬಾತ್ಮಿ ಬಂದ ಮೇರೆಗೆ ಕಲಘಟಗಿ ತಾ ತಂಬೂರ ಗ್ರಾಮದಲ್ಲಿ ಅನಧಿಕೃತವಾಗಿ ಸಾರಾಯಿ ತಯಾರಿಸಿಕೊಂಡು ಮಾರಾಟ ಮಾಡುತ್ತಿರುವ ಬಗ್ಗೆ ಖಚಿತ ಬಾತ್ಮಿ ಬಂದಿತ್ತು. ನನ್ನ ಸಿಬ್ಬಂದಿಗಳಿಗೆ ಸದರಿ ವಿಷಯನ್ನು ತಿಳಿಸಿರುತ್ತೇನೇ. ಅಲ್ಲೆ 2 ಜನ ಪಂಚರನ್ನು ಅಂದರೆ ಚಾ.ಸಾ.2 ಮತ್ತು 3ರವರನ್ನು ಕರೆದುಕೊಂಡು ಅವರಿಗೂ ವಿಷಯ ತಿಳಿಸಿ, ನಾನು ಮತು ್ತಚಾ.ಸಾ.2 ರಿಂದ 7ರವರು ಸೇರಿಕೊಂಡು ಬೆಳಿಗ್ಗೆ 9.00 ಗಂಟೆಗೆ ತಂಬೂರ ಗ್ರಾಮಕ್ಕೆ ಹೋಗಿರುತ್ತೇವೆ. ಬಸವನ ದೇವರ ಗುಡಿಯ ಹತ್ತಿರ ನಾವು ವಾಹನವನ್ನು ನಿಲ್ಲಿಸಿ ವಾಚ್ ಮಾಡಿರುತ್ತೇವೆ. ಇಬ್ಬರು ವ್ಯಕ್ತಿಗಳು ರಟ್ಟಿನ ಪೆಟ್ಟಿಗೆಯಲ್ಲಿ ಸರಾಯಿ ಪ್ಯಾಕೇಟ್‌ಗಳನ್ನು ಮಾರಾಟ ಮಾಡುತ್ತಿದ್ದರು. ಅದನ್ನು ನೋಡಿ ಬಾತ್ಮಿಯನ್ನು ಖಚಿತಪಡಿಸಿಕೊಂಡು 9.05 ನಿಮಿಷಕ್ಕೆ ದಾಳಿ ಮಾಡಿರುತ್ತೇವೆ. ನಮ್ಮನ್ನು ನೋಡಿ ಸರಾಯಿ ಖರೀದಿ ಮಾಡಲು ಬಂದ ಜನರು ಓಡಿ ಹೋಗಿರುತ್ತಾರೆ. ಸರಾಯಿ ಮಾರುವ 2 ಆರೋಪಿತರನ್ನು ನಾವು ಬಂಧಿಸಿ ಅವರ ಹೆಸರನು ್ನವಿಚಾರಿಸಿದಾ ಗ ನಾಗರಾಜ ಸವಣೂರ ಮತ್ತು ಗುರುಸಿದ್ದಪ್ಪ ತಾವರೆಗೆರೆ ಎಂದು ಹೇಳಿರುತ್ತಾರೆ. ಆರೋಪಿತನ ಹತ್ತಿರ ಇದ್ದ ಬಾಕ್ಸ್‌ನ್ನು ಪರಿಶೀಲಿಸಿದಾಗ ನಾಗರಾಜ ಸವಣೂರ ಹತ್ತಿರ ಇದ್ದ ರಟ್ಟಿನ ಪೆಟ್ಟಿಗೆಯಲ್ಲಿ 90 ಎಮ್ ಎಲ್ ನ ಓರಿಜನಲ್ ಚಾಯ್ಸ್ ಡಿಲಕ್ಸ್ ವಿಸ್ಕಿಯ 70 ಮಧ್ಯದ ಟೆಟ್ರಾ ಪ್ಯಾಕೇಟ್‌ಗಳು ಇದ್ದವು. ಮತು ್ತಗುರುಸಿದ್ದಪ್ಪನ ಹತ್ತಿರ ಇದ್ದ ರಟ್ಟಿನ ಪೆಟ್ಟಿಗೆಯಲ್ಲಿ 90 ಎಮ್ ಎಲ್ ನ ಓರಿಜನಲ್ ಚಾಯ್ಸ್ ಡಿಲಕ್ಸ್ ವಿಸ್ಕಿಯ 55 ಮಧ್ಯದ ಟೆಟ್ರಾ ಪ್ಯಾಕೇಟ್‌ಗಳು ಇದ್ದವು. ಆರೋಪಿಯ ಹತ್ತಿರ ಪಾಸ್ ಪರ್ಮಿಟ್ ಇರಲಿಲ್ಲ.

ಪಂಚನಾಮೆಯನ್ನು 9.05 ನಿಮಿಷದದಿಂದ 10.15 ನಿಮಿಷದವರೆಗೆ ಸ್ಥಳದಲ್ಲೆ ಪಂಚನಾಮೆ ಮಾಡಿರುತ್ತೇವೆ. ಮುದ್ದೆಮಾಲನ್ನು ಬಿಳಿ ಪಟ್ಟಿಯನ್ನು ಸುತ್ತಿ ಶೀಲ್ ಮಾಡಿರುತ್ತೇವೆ. ನನ್ನ ಮತ್ತು ಪಂಚರ ಸಹಿ ಇರುವ ಚೀಟಿಯನ್ನು ಅಂಟಿಸಿರುತ್ತೇವೆ. ಆರೋಪಿತನು ಮುದ್ದೆಮಾಲು ಸಮೇತ ಠಾಣೆಗೆ ಬಂದು ನನ್ನ ದೂರನ್ನು ತಯಾರಿಸಿ ಚಾ.ಸಾ.10ರವರಿಗೆ ವಹಿಸಿಕೊಟ್ಟಿರುತ್ತೇನೆ.

ಸ್ಥಳ ಮಹಜರ್‌ನ್ನು ಈಗಾಗಲೇ ನಿಪಿ 1 ಅಂತ ಗುರುತಿಸಲಾಗಿದ್ದು ಸಾಕ್ಷಿ ಸಹಿಯನ್ನು 1(ಬಿ) ಅಂತ ಗುರುತಿಸಲಾಯಿತು. ನನ್ನ ದೂರನ್ನು ಈಗ ನೋಡಿದು ನಿಪಿ2 ಎಂದು ಗುರುತಿಸಲಾಯಿತು. ಅದರಲ್ಲಿರುವ ನನ್ನ ಸಹಿಯನ್ನು ನಿಪಿ2(ಎ) ಎಂದು ಗುರುತಿಸಲಾಯಿತು. ಮಾದರಿ ಮೊಹರಿನ ಚೀಟಿಯನ್ನು ಈಗ ನೋಡಿದ್ದು ಅದನ್ನು ನಿಪಿ3 ಎಂದು ಅದರಲ್ಲಿರುವ ನನ್ನ ಸಹಿಯನ್ನು ನಿಪಿ3(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿದ್ದೇನೆ.

ಮುದ್ದೆಮಾಲನ್ನು ಈ ಗನ್ಯಾಯೂಲಯದ ಮುಂದೆ ನೋಡಿದ್ದು 70 ಟೆಟ್ರಾ ಪ್ಯಾಕೇಟ್‌ಗಳನ್ನು ಹೊಂದಿರುವ ಬಾಕ್ಸ್ ಮತು‍್ತ ಟೆಟ್ರಾ ಪ್ಯಾಕೇಟ್‌ಗಳನ್ನು ಒಟ್ಟಿಗೆ ಸೇರಿಸಿ ಎಮ್ ಒ 1 ಎಂದು ಗುರುತಿಸಲಾಯಿತು. 55 ಟೆಟ್ರಾ ಪ್ಯಾಕೇಟ್‌ಗಳನ್ನು ಹೊಂದಿರುವ ಬಾಕ್ಸ್ ಮತ್ತು ಟೆಟ್ರಾ ಪ್ಯಾಕೇಟ್‌ಗಳನ್ನು ಒಟ್ಟಿಗೆ ಸೇರಿಸಿ ಎಮ್ ಒ 2 ಎಂದು ಗುರುತಿಸಲಾಯಿತು.

ಪಾಟೀ ಸವಾಲು : ಶ್ರೀ ಕೆ ಬಿ ಜೆ ವಕೀಲರಿಂದ

ಘಟನಾ ದಿನದಂದು ನಾನು ಕರ್ತವ್ಯದಲ್ಲಿ ಇದ್ದೆ ಎಂದು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಅಂದರೆ ದೂರನ್ನು ಹಾಜರುಪಡಿಸಿದ್ದೇನೇ. ನಾನು ಮತ್ತು ಚಾ.ಸಾ.2 ರಿಂದ 7ರವರು ದಾಳಿಯನ್ನು ಮಾಡಿಲ್ಲ, ಆರೋಪಿತನನ್ನು ಹಿಡಿದಿಲ್ಲ, ಆರೋಪಿಗೂ ಮತು‍್ತ ಮುದ್ದೆಮಾಲಿಗೂ ಯಾವುದೇ ಸಂಬಂಧವಿಲ್ಲ ಅಂದರೆ ಸರಿಯಲ್ಲ. ಪಂಚನಾಮೆಯನ್ನು ನಮ್ಮ ಠಾಣೆಯಲ್ಲಿ ಮಾಡಿರುತ್ತೇವೆ ಅಂದರೆ ಸರಿಯಲ್ಲ. ನಾವು ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಪ್ರಕರಣವನ್ನು ಮಾಡಿದ್ದೇವೆ ಅಂದರೆ. ಸರಿಯಲ್ಲ.

(ಮರು ವಿಚಾರಣೆ ಇಲ್ಲ)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಅದೆ,

ದಿವಾಣಿ ನ್ಯಾಯೂಧೀಶರು ಹಾಗೂ
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ.